# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ | : | 335 |
| ಸದಸ್ಯರ ಹೆಸರು | : | ಶ್ರೀಮತಿ ಎಸ್.ವೀಣಾ ಅಚ್ಚಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : | ತೋಟಗಾರಿಕೆ ಮತ್ತು ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 18.02.2022 |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕೊಡಗು ಜಿಲ್ಲೆಯಲ್ಲಿ ಒಟ್ಟು ಎಷ್ಟು ವಿಸ್ತೀರ್ಣದ ಕ್ಷೇತ್ರದಲ್ಲಿ ಕಿತ್ತಳೆ ಮತ್ತು ಏಲಕ್ಕಿ ಬೆಳೆ ಬೆಳೆಯಲಾಗುತ್ತಿದೆ; | ಕೊಡಗು ಜಿಲ್ಲೆಯಲ್ಲಿ ಕಿತ್ತಳೆ ಬೆಳೆಯನ್ನು 3231 ಹೆಕ್ಟೇರ್ ಪ್ರದೇಶದಲ್ಲಿ ಮತ್ತು ಏಲಕ್ಕಿ ಬೆಳೆಯನ್ನು 680 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿದೆ. |
| ಆ) | ಜಿಲ್ಲೆಯಲ್ಲಿ ಕಿತ್ತಳೆ ಮತ್ತು ಏಲಕ್ಕಿಯ ವಾರ್ಷಿಕ ಉತ್ಪನ್ನ ಎಷ್ಟು; (ವಿವರ ನೀಡುವುದು) | ಜಿಲ್ಲೆಯಲ್ಲಿ ಕಿತ್ತಳೆಯನ್ನು ಅಂದಾಜು ಉತ್ಪನ್ನ 80815 ಮೆ.ಟನ್ ಮತ್ತು ಏಲಕ್ಕಿ 41 ಮೆ.ಟನ್ ಗಳಷ್ಟು ವಾರ್ಷಿಕವಾಗಿ ಉತ್ಪಾದನೆ ಮಾಡಲಾಗುತ್ತಿದೆ. |
| ಇ) | ಜಿಲ್ಲೆಯಲ್ಲಿ ಕಿತ್ತಳೆ ಮತ್ತು ಏಲಕ್ಕಿ ಬೆಳೆಯುವ ಕ್ಷೇತ್ರದ ವಿಸ್ತೀರ್ಣವನ್ನು ವಿಸ್ತರಿಸಲು ಸರ್ಕಾರ ರೂಪಿಸಿರುವ ಕಾರ್ಯಕ್ರಮಗಳೇನು; | ಜಿಲ್ಲೆಯಲ್ಲಿ ಕಿತ್ತಳೆ ಮತ್ತು ಏಲಕ್ಕಿ ಬೆಳೆಯುವ ಕ್ಷೇತ್ರದ ವಿಸ್ತೀರ್ಣವನ್ನು ವಿಸ್ತರಿಸಲು ಸರ್ಕಾರ ರೂಪಿಸಿರುವ ಕಾರ್ಯಕ್ರಮಗಳು ಈ ಕೆಳಗಿನಂತಿವೆ. |
| ಈ) | ಕಿತ್ತಳೆ ಮತ್ತು ಏಲಕ್ಕಿ ಬೆಳೆಗಳ ಪುನಃಶ್ಚೇತನ ಹಾಗೂ ಪ್ರೋತ್ಸಾಹಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? | **ಕಿತ್ತಳೆ:**<br>1. ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಹೊಸ ಪ್ರದೇಶ ವಿಸ್ತರಣೆ ಕೈಗೊಳ್ಳಲು ಶೇ 40 ರಂತೆ ರೂ. 40,000/-ಗಳ 4 ಹೆಕ್ಟೇರ್ ಪ್ರದೇಶಕ್ಕೆ ಸಹಾಯಧನ ನೀಡಲಾಗುತ್ತಿದೆ.<br>2. ಪುನಶ್ಚೇತನಕ್ಕಾಗಿ ಪ್ರತಿ ಹೇಕ್ಟೆರ್ ಗೆ ಶೇ 50 ರಂತೆ 20,000/-ರೂಗಳಿಗೆ, 4 ಹೆಕ್ಟೇರ್ ವರೆಗೆ ಸಹಾಯಧನ ನೀಡಲಾಗುತ್ತಿದೆ ಹಾಗೂ 140 ಗಿಡಗಳಿಗೆ ರೂ 10,000/-, 145 ಕೆ.ಜಿ. Biomix, 35 ಕೆ.ಜಿ ಜೈವಿಕ ಗೊಬ್ಬರ ಮತ್ತು ಕಿತ್ತಳೆ ಸ್ಪೇಶಲ್ ಅನ್ನು ನೀಡಲಾಗುತ್ತಿದೆ. |

| | | |
|---|---|---|
| | | 3. ಹನೀ ನೀರಾವರಿ ಅಳವಡಿಸಲು ಪ.ಜಾತಿ ಮತ್ತು ಪ.ಪಂಗಡ ಹಾಗೂ ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ಶೇ 90 ರಷ್ಟು ಮತ್ತು ಸಾಮಾನ್ಯ ರೈತರಿಗೆ ಶೇ 45 ರಷ್ಟು ಸಹಾಯಧನ ನೀಡಲಾಗುತ್ತಿದೆ.<br>4. ಸಮಗ್ರ ರೋಗ ಮತ್ತು ಕೀಟ ನಿರ್ವಹಣೆಗಾಗಿ ಪ್ರತಿ ಹೆಕ್ಟೆರ್ ಗೆ ರೂ 1200/- ರಂತೆ 4 ಹೆಕ್ಟೆರ್ ವರೆಗೆ ಸಹಾಯಧನ ನೀಡಲಾಗುತ್ತಿದೆ.<br>5. ರೈತರಿಗೆ ಕಾಲಕಾಲಕ್ಕೆ ತಾಂತ್ರಿಕ ಮಾಹಿತಿ ನೀಡಲಾಗುತ್ತಿದೆ.<br>6. ರೈತರಿಗೆ ಕಿತ್ತಳೆ ಸಸಿಗಳನ್ನು ತೋಟಗಾರಿಕೆ ಕ್ಷೇತ್ರಗಳಲಿ ಉತ್ಪಾದಿಸಿ ಯೋಗ್ಯ ದರದಲ್ಲಿ ಒದಗಿಸಲಾಗುತ್ತಿದೆ.<br>ಏಲಕ್ಕಿ:<br>1. ಸಾಂಬಾರ ಮಂಡಳಿಯ ಮುಖಾಂತರ ಏಲಕ್ಕಿ ತೋಟಗಳ ಮರುನಾಟಿ ಕಾರ್ಯಕ್ರಮಕ್ಕೆ ಸಾಮಾನ್ಯ ವರ್ಗದ ರೈತರಿಗೆ ಹಾಗೂ ಪ.ಜಾತಿ ಮತ್ತು ಪ.ಪಂಗಡ ಶೇ 33 % ಮತ್ತು ಶೇ 75 % ರಂತೆ 2 ವರ್ಷಗಳ ಅವಧಿಕೆ 75000/- ಮತ್ತು 1.68 ಲಕ್ಷಗಳ ಸಹಾಯಧನವನ್ನು ಅನುಕ್ರಮವಾಗಿ ನೀಡಲಾಗುತ್ತಿದೆ.<br>2. ಏಲಕ್ಕಿ ಒಣಗಿಸುವ ಯಂತ್ರ ಖರೀದಿಸಲು ಸಾಮಾನ್ಯ ಹಾಗೂ ಪ.ಜಾತಿ ಮತ್ತು ಪ.ಪಂಗಡ ರೈತರಿಗೆ ಅನುಕ್ರಮವಾಗಿ 1.50 ಲಕ್ಷ ಮತ್ತು 3.37 ಲಕ್ಷಗಳ ಸಹಾಯಧನ ನೀಡಲಾಗುತ್ತಿದೆ. |

HORTI / 65 / HGM / 2022

(ಮುನಿರತ್ನ)

ತೋಟಗಾರಿಕೆ ಹಾಗೂ ಯೋಜನೆ,

ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು